ಹೆಂಡತಿ ಮಗಳ ಮುಖಗಳನ್ನು ಒಮ್ಮೆ ನೋಡಿ, 'ಅಲ್ಲವೇ ರೊಸಾಲಿಯ? ಅಲ್ಲವೇ ಸಾರಾ?' ಎಂದ.

ಗಂಡನ ಈ ಸಂಶಯ ಪ್ರತಿಯೊಬ್ಬರನ್ನೂ ಆಶ್ಚರ್ಯಗೊಳಿಸಿತು. ಅವನು ಯೋಚಿಸುತ್ತಿದ್ದಂತಿತ್ತು. 'ಯಾರಾದರೂ ಸಮುದ್ರಕ್ಕೆ ಏನನ್ನು ಬೇಕಾದರೂ ಒಗೆಯಬಹುದು ಅಂದುಕೊಂಡಿದ್ದೆ.'

'ಇಲ್ಲ. ಖಂಡಿತವಾಗಿಯೂ ಇಲ್ಲ! ಅಷ್ಟೇ ನಮಗೆ ಬೇಕಾಗಿರುವುದು.' ಯಾವೊ ಎದ್ದು ನಿಂತ. ಅವನು ಸನ್ನಿ ಹಿಡಿದವನಂತಾಗಿದ್ದ.

'ನನ್ನನ್ನು ನಾನೇ ಸಮುದ್ರಕ್ಕೆ ಒಗೆದರೆ? ಹಾಗೆ ಮಾಡಬಹುದೇ ನಾನು?'

ಬಂದರು ಅಧಿಕಾರಿಯ ಕಚೇರಿಯಿಂದ ಬಂದ ವ್ಯಕ್ತಿ 'ಅದು ಅವಲಂಬಿಸಿರುತ್ತದೆ' ಎಂದುತ್ತರಿಸಿದ.

'ಅವಲಂಬಿಸಿರುವುದು ಯಾರನ್ನು? ನನ್ನ ಮೇಲೆ ಅಲ್ಲದೆ ಇನ್ನು ಯಾರ ಮೇಲೆ? ನಾನೊಬ್ಬ ಸ್ವತಂತ್ರ ಜೀವಿ. ನನ್ನ ಬದುಕು ನನಗೇ ಸೇರಿದ್ದು.'

'ನೀವು ತಿಳಕೊಂಡ ಹಾಗಲ್ಲ' ಎಂದ ಆ ವ್ಯಕ್ತಿ.

ಅದೇ ತಾನೇ ಒಳಗೆ ಕಾಲಿಟ್ಟ ಲೆಫ್ಟಿನೆಂಟನ್ನು ನೋಡಿ, ಎಂದಿನಂತೆ ಸ್ವಾಗತಿಸುವ ರೀತಿಯಲ್ಲಿ ಸಾರಾ ನಗು ಚೆಲ್ಲಿದಳು. ಮತ್ತು ಅವನಿಗೆ ಮುತ್ತು ಕೊಡಲು ಓಡಿದಳು.

'ಡಾರ್ಲಿಂಗ್, ನಮ್ಮ ಕೋಣೆ ನೋಡು. ಈಗ ಅದು ಚೆನ್ನಾಗಿ ಕಾಣುತ್ತಿಲ್ಲವೇ?'

'ಹೌದು, ತುಂಬಾ ಚೆನ್ನಾಗಿದೆ. ಆದರೆ, ಹೊಸದಾಗಿ ತರುವುದನ್ನು ನೀನು ಎಲ್ಲಿ ಇಡುತ್ತೀಯಾ?'

'ಹೊಸದಾಗಿ ತರುವುದು?'

'ಹೌದು, ನೀನು ಹೊಸದನ್ನು ತರುತ್ತಿಲ್ಲವೇ?'

ಸಾರಾ ಮತ್ತು ಅವಳ ತಾಯಿ ಆಶ್ಚರ್ಯದಿಂದ ಒಬ್ಬರೊಬ್ಬರ ಮುಖ ನೋಡಿದರು. 'ನನಗೆ ಪಿಯಾನೊ ಅಂದರೆ ಬಹಳ ಇಷ್ಟ. ಅದು ನನ್ನನ್ನು ಎಷ್ಟು ಆರಾಮದಲ್ಲಿರಿಸುತ್ತದೆ ಅನ್ನುವ ಕಲ್ಪನೆ ನಿನಗಿಲ್ಲ. ಇಡಿಯ ದಿನ ಗುಂಡುಗಳ ಶಬ್ದ ಕೇಳಿ ಕೇಳಿ ಸಾಕಾಗಿದೆ ನನಗೆ. ಸಂಜೆಯ ಹೊತ್ತು ಒಂದಿಷ್ಟು ಸಂಗೀತ ಕೇಳಿದರೆ...'

ಸಾರಾ ಒತ್ತಿ ಬಂದ ಕೆಮ್ಮನ್ನು ಹೊರಹಾಕಿದಳು. ಯಾವೊ ದೆ ಒಲಿವೈರಾ ಹೊರಗೆ ನಡೆದ. ಅವನ ಉಸುರು ಕಟ್ಟಿ ಹೋಗಿತ್ತು. ಅವನಿಗೆ ಹೊಸ ಗಾಳಿ ಬೇಕಿತ್ತು. ಕತ್ತಲಲ್ಲಿ ಹೀಗೆ ಯಾರು ಹೊರ ಬಂದಾರು? ಯಾರು ಅವನನ್ನು ಪ್ರಶ್ನಿಸಿಯಾರು? ಜಗತ್ತಿನಿಂದ ಮರೆಯಾದ, ತನ್ನ ಪಾಡಿಗೆ ತಾನು ಒಂದು ಮೂಲೆಯಲ್ಲಿ ಬಿದ್ದುಕೊಂಡಿದ್ದ ಒಂದು ಪಿಯಾನೊ ಹೀಗೊಂದು ಸಾರ್ವಜನಿಕ ಕಾಳಜಿಗೆ ತುತ್ತಾಗಬಹುದೆನ್ನುವುದು ಅವನಿಗೆ ಹೇಗೆ ತಿಳಿಯಬೇಕು? ಅವನು ಅದನ್ನು ಅಲ್ಲಿಯೇ ಯಾಕೆ ಬಿಡಲಿಲ್ಲ?

ಅದೀಗ ಮೈಲು ದೂರ ಸಾಗಿದೆ. ಬಹಳ ದೂರ. ಸಮುದ್ರದಲ್ಲಿ ತೇಲಿ ಹೋಗಿದೆ ಮತ್ತು ಸ್ವತಂತ್ರವಾಗಿದೆ. ಅವನಿಗಿಂತ, ರೊಸಾಲಿಯಳಿಗಿಂತ, ಸಾರಾಳಿಗಿಂತ ಹೆಚ್ಚು ಸ್ವತಂತ್ರವಾಗಿದೆ. ಈಗ ತ್ಯಜಿಸಲ್ಪಟ್ಟದ್ದು ಅವನು. ಅವನೆಂದರೆ ಯಾವೊ ದೆ ಒಲಿವೈರಾ. ತನ್ನನ್ನು ತನ್ನಿಂದ ಮತ್ತು ತನ್ನ ಸಂಸಾರದಿಂದ. ಅದು ಅವರ ಪಿಯಾನೊ ಆಗಿರಲಿಲ್ಲ. ಯಾವುದೋ ಒಂದು ಪ್ರಪಂಚದಿಂದ ಬೇರ್ಪಟ್ಟ ಪ್ರಾಣಿ. ಜೀವಂತವಾದ ಹಾಗೂ ಸ್ವಾಭಿಮಾನ ತುಂಬಿದ ಪ್ರಾಣಿ. ಏಳು ಸಮುದ್ರಗಳನ್ನು ಧೈರ್ಯದಿಂದ ದಾಟುತ್ತಿದೆ. ಪ್ರಪಂಚದ ಎಲ್ಲ ಸಮುದ್ರಗಳ ತೆಕ್ಕೆಯಲ್ಲಿ ಮುಂದೆ ಹೋಗುತ್ತಿದೆ. ತನಗನ್ನಿಸಿದ ಕಡೆ ಸ್ವತಂತ್ರವಾಗಿ. ತನಗನ್ನಿಸಿದ್ದನ್ನು ಮಾಡುವ ಸ್ವಾತಂತ್ರ್ಯದಿಂದ.

ಮನೆ ಎದುರಿನ ಮರದ ಕೆಳಗೆ ನೀಗ್ರೋ ಹುಡುಗರು ತಮ್ಮ ಎರಡನೆಯ ದಿನದ ಕೆಲಸ ಮಾಡಿದುದರ ಕೂಲಿಗಾಗಿ ಕಾಯುತ್ತ ನಿಂತಿದ್ದರು. ಅವರೆಲ್ಲ ಬಹಳ ಶ್ರಮ ಹಾಕಿದ್ದರು. ಕತ್ತಲೆಯಲ್ಲಿ ಅವರ ಬೋಳು ತಲೆಗಳನ್ನು ಗುರುತಿಸುವುದು ಕಠಿಣವಾಗಿತ್ತು. ಅವರ ನಡುವೆ ತುಸು ಪರಿಚಿತವಾದ ಒಂದು ಆಕೃತಿಯೂ ಅವನಿಗೆ ಕಾಣಿಸಿತು. ಆ ವ್ಯಕ್ತಿ ಕೈತೋಟದ ಗೇಟು ತೆಗೆದು ಒಳಗೆ ಬರಲು ಅಪ್ಪಣೆ ಕೇಳಿದ.

ಯಾವೊ ಅವನನ್ನು ಗುರುತಿಸುವುದು ಕಠಿಣವಾಗಿತ್ತು. ಆದರೆ, ಆ ಕೆಂಚುಗೂದಲ ವ್ಯಕ್ತಿ ಕೇಳಬಹುದಾದ ಪ್ರಶ್ನೆಗೆ ಉತ್ತರಿಸುವ ಯಾವ ಸನ್ನಾಹವನ್ನೂ ಅವನು ಮಾಡಲಾರದವನಾಗಿದ್ದ–

'ಪಿಯಾನೊಗಾಗಿ ಮರಳಿ ಬಂದಿದ್ದೇನೆ. ಅದಕ್ಕೊಂದು ಯೋಗ್ಯ ಬೆಲೆ ಕೊಡಬಹುದೆಂದು ನನಗನ್ನಿಸುತ್ತದೆ.'

●